# ಷಹ ಜಹಾನ್

**(1592)1628 -1658 (1666)**

1) ಪೀಠಿಕೆ
2) ಪ್ರಾರಂಬಿಕ ಜೀವನ.
3) ಪ್ರಾರಂಬಿಕ ಬೆಳವಣಿಗೆ.
4) ಪ್ರಾರಂಬಿಕ ಪ್ರಮುಖ ಸಾಧನೆಗಳು.
5) ಸಿಂಹಾಸನಕ್ಕಾಗಿ ಹೋರಾಟ
6) ಸಿಂಹಾಸನರೋಹಣ
7) ಸೈನಿಕ ಸಾಧನೆಗಳು.
8) ಆಡಳಿತ ಮತ್ತು ಸಂಸ್ಕೃತಿಕ ಸಾಧನೆಗಳು ( ಸುವರ್ಣ ಯುಗ)
9) ಉತ್ತರಾಧಿಕಾರಿಗಳ ಹೋರಾಟಗಳು
10) ಕೊನೆಯ ದಿನಗಳು & ಮರಣ
11) ವ್ಯಕ್ತಿತ್ವ & ವಿಮರ್ಶೆ

**1. ಪೀಠಿಕೆ. -**

ಷಹಜಹಾನ್ (ಶಹಾಬ್-ಉದ್-ದಿನ್ ಮುಹಮ್ಮದ್ ಖುರ್ರಾಮ್) ಮೊಘಲ್ ಸಾಮ್ರಾಜ್ಯದ ಅತ್ಯಂತ ಯಶಸ್ವಿ ಚಕ್ರವರ್ತಿಗಳಲ್ಲಿ ಒಬ್ಬರು. ಬಾಬರ್, ಹುಮಾಯೂನ್, ಅಕ್ಬರ್ ಮತ್ತು ಜಹಾಂಗೀರ್ ನಂತರ ಐದನೇ ಮೊಘಲ್ ಆಡಳಿತಗಾರರಾಗಿದ್ದರು. ಅವರ ತಂದೆ ಜಹಾಂಗೀರ್ ಅವರ ನಿಧನದ ನಂತರ ಉತ್ತರಾಧಿಕಾರದ ಯುದ್ಧವನ್ನು ಗೆದ್ದ ನಂತರ, ಷಹಜಹಾನ್ 30 ವರ್ಷಗಳ ಕಾಲ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಆಳಿದರು. ಅವನ ಆಳ್ವಿಕೆಯಲ್ಲಿ, ಮೊಘಲ್ ಸಾಮ್ರಾಜ್ಯವು ಅಭಿವೃದ್ಧಿ ಹೊಂದಿತು, ಅವನ ಆಳ್ವಿಕೆಯು ಸಾಮ್ರಾಜ್ಯದ ಸುವರ್ಣ ಯುಗವಾಯಿತು. ಷಹಜಹಾನ್ ಸಮರ್ಥ ಆಡಳಿತಗಾರ ಮತ್ತು ದಂಡನಾಯಕರಾಗಿದ್ದರೂ, ಅವರು ತಮ್ಮ ಪ್ರೀತಿಯ ಹೆಂಡತಿ ಮುಮ್ತಾಜ್ ಮಹಲ್ ಅವರ ನೆನಪಿಗಾಗಿ ನಿರ್ಮಿಸಿದ ತಾಜ್ ಮಹಲ್ ನಿರ್ಮಾಣಕ್ಕೆ ಹೆಚ್ಚು ಹೆಸರುವಾಸಿಯಾಗಿದ್ದಾರೆ. ವಾಸ್ತುಶಿಲ್ಪವು ಸಾಮಾನ್ಯವಾಗಿ ಮೊಘಲ್ ನಿರ್ಮಾಣದ ಅತ್ಯುತ್ತಮ ಕಾಲವನ್ನು ಕಂಡಿತು. ಉತ್ತರ ಭಾರತದಾದ್ಯಂತ ಅನೇಕ ಸುಂದರವಾದ ಸ್ಮಾರಕಗಳನ್ನು ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಷಹಜಹಾನ್ ದೆಹಲಿಯ ಶಹಜಹಾನಾಬಾದ್ ಸ್ಥಾಪಕರೂ ಹೌದು. ಅವರು ಸ್ವತಃ ನಿರ್ಮಿಸಿದ ಸೊಗಸಾದ 'ಮಯೂರ ಸಿಂಹಾಸನ ' ಆಧುನಿಕ ಅಂದಾಜಿನ ಪ್ರಕಾರ ಕೋಟ್ಯಾಂತರ ರೂಪಾಯಿ ಮೌಲ್ಯದ್ದಾಗಿದೆ ಎಂದು ನಂಬಲಾಗಿದೆ. ಅವನ ಅಂತಿಮ ದಿನಗಳಲ್ಲಿ, ಅವನ ಮಗ ಔರಂಗಜೇಬನು ಅವನನ್ನು ಸೆರೆಯಲ್ಲಿಟ್ಟುಕೊಂಡನು, ಅವನು ಅವನ ನಂತರ ಸಿಂಹಾಸನಕ್ಕೆ ಬಂದನು.

**2. ಬಾಲ್ಯ ಜೀವನ**

ಷಹ ಜಹಾನ್ 5 ನೇ ಜನವರಿ 1592 ರಂದು ಚಕ್ರವರ್ತಿ ಜಹಾಂಗೀರ್ ಮತ್ತು ಅವರ ಎರಡನೇ ಪತ್ನಿ ಜಗತ್ ಗೋಸ್ಸೈನಿ (ರಜಪೂತ ರಾಜಕುಮಾರಿ) ದಂಪತಿಗೆ ಜನಿಸಿದರು. ಮೂಲ ಹೆಸರು: ಶಹಾಬ್-ಉದ್-ದಿನ್ ಮುಹಮ್ಮದ್ ಖುರಾಮ್. ಖುರ್ರಾಮ್ ಅಕ್ಬರ್ ಮತ್ತು ರುಕೈಯಾ ಸುಲ್ತಾನ್ ಬೇಗಂ ಅವರ ಆರೈಕೆಯಲ್ಲಿ ಬೆಳೆಯಲಾರಂಭಿಸಿದನು. ಸ್ವಾಭಾವಿಕವಾಗಿ, ಯುವ ಖುರ್ರಾಮ್ ಅಕ್ಬರ್ ಮತ್ತು ಅವನ ಸಾಕು ತಾಯಿಯನ್ನು ಹೆಚ್ಚು ಇಷ್ಟಪಡುತ್ತಿದ್ದನು. ರುಕೈಯಾ ಸುಲ್ತಾನ್ ಬೇಗಂ ಅವರನ್ನು ಪ್ರೀತಿ ಮತ್ತು ಕಾಳಜಿಯಿಂದ ಬೆಳೆಸಿದಳು. ಖುರಾಮ್‌ನಿಗೆ ಖುಸ್ರಾರು ಮಿರ್ಜಾ, ಪಫರ್ವೇಜಜ್ ಮಿರ್ಜಾ, ಮತ್ತು ಶಹರಿಯಾರ್ ಮಿರ್ಜಾ ಎಂಬ ಸಹೋದರರಿದ್ದರು. ಇವರ ಶಿಕ್ಷಣಕ್ಕಾಗಿ ಶ್ರೇಷ್ಠ ಉಸ್ತಾದರ ನೇಮಕ ಮಾಡಿ, ರಾಜಕುಮಾರರಿಗೆ ರಾಜನೀತಿ, ಜ್ಯೋತಿಷ್ಯ, ಖಗೋಳ, ರಾಜನೀತಿ,

ದಂಡನೀತಿ, ಚಿತ್ರಕಲೆ, ಗಣಿತ, ವೈದ್ಯಶಾಸ್ತ್ರ, ಅಲ್ಲದೇ ರಣನೀತಿ, ಯುದ್ಧನೀತಿ, ಕುದರೆ ಸವಾರಿ, ಗಜಸವಾರಿ, ಸಿಡಿಮದ್ದುಗಳ ಉಪಯೋಗ, ಇನ್ನೂ ಮುಂತಾದ ಬಗೆಯ ಶಿಕ್ಷಣ ನೀಡಲಾಯಿತು, ಅದರಲ್ಲಿ ಷಹಜಹಾನ್ ಚಿತ್ರಕಲೆ, ಸಂಗೀತ ಮತ್ತು ಕಾವ್ಯಗಳನ್ನು ಒಳಗೊಂಡ ಸಾಂಸ್ಕೃತಿಕ ಕಲೆಗಳಲ್ಲಿ ಆಸಾಕ್ತಿಯಿಂದ ತರಬೇತಿಯನ್ನು ಪಡೆದನು.

**3. ಪ್ರಾರಂಬಿಕ ಬೆಳವಣಿಗೆ & ಪ್ರಮುಖ ಸಾಧನೆಗಳು.**

- 1606 ರಲ್ಲಿ ಖುಸ್ರುವಿನ ದಂಗೆಯ ಸಮಯದಲ್ಲಿ ಜಹಾಂಗಿರನು ಖುರ್‍ರಂನನ್ನು ರಾಜಧಾನಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕ.
- 1607ರಲ್ಲಿ 7000 ಜಾಟ್, 8000 ಸರದಾರರ ಮನ್‌ಸಬ್‌ದಾರನಾಗಿ ನೇಮಕ
- 1608 ರಲ್ಲಿ ಹಿಸ್ಸಾರಾ, ಫಿರೋಜಾ ಜಹಗೀರು.
- ಮೇವಾರದ ದಂಡಯಾತ್ರೆ ;- ಜಹಾಂಗೀರನು 1606 ರಿಂದ 1615 ರವರೆಗೆ ಮೇವಾರವನ್ನು ಸದೆಬಡಿಯಲು ಫರ್ವೇಜಜ್, ಮಹಬತ್‌ಖಾನ, ಅಬ್ದುಲ್‌ಖಾನ, ಅಜೀಜ್‌ಕೋಕ್ ಮುಂತಾದ ನೇತೃತ್ವದಲ್ಲಿ ಕಳುಹಿಸಿದ ಸೈನ್ಯ ವಿಫಲವಾಗಿತ್ತು. ಕಠಿಣವಾದ ಮೇವಾಡದ ಗೆಲುವಿಗಾಗಿ ಖುರ್‍ರಂನನ್ನು ನೇಮಕ. ಖುರ್‍ರಂನು ಯಾರಿಗೂ ಮಣಿಯದ ರಾಜಾ ಅಮರಸಿಂಗ್‌ನನ್ನು ಒಪ್ಪಂದಕ್ಕೆ ತಂದು ಮೊಗಲ್‌ರ ಸಾರ್ವಭೌಮತ್ವ ಒಪ್ಪುವಂತೆ ಮಾಡಿದನು. ತಂದೆ ಜಹಾಂಗೀರನು ಇವನ ಸಹಾಸ ಮತ್ತು ಬುದ್ಧಿವಂತಿಗೆ ಮೆಚ್ಚಿ ಖುರ್‍ರಂನಿಗೆ "ಷಹಾಖುರ್‍ರಂ " ಎಂದು ಬಿರುದು ಹಾಗೂ ನೂರ್‌ಜಹಾನಳಿಂದ ಅತ್ಯಮೂಲ್ಯವಾದ ಬೆಲೆಬಾಳುವ ಮುತ್ತುಗಳ ರಾಶಿಯನ್ನು ಪಡೆದನು
- ದಕ್ಷಿಣದ ಭಾರತದ ವಿಜಯ;- ಅಹ್ಮದನಗರ, ಗೊಲ್ಕಂಡ, ವಿಜಾಪುರ, ಬಿದರಗಳ ಸಂಯುಕ್ತ ಸೈನ್ಯದ ದಂಡನಾಯಕ "ಮಲಿಕ್ ಅಂಬರ " ನನ್ನು ಮಣಿಸಿದ್ದರಿಂದ ತಂದೆ ಜಹಾಂಗೀರನು ಇವನ ಸಹಾಸ ಮತ್ತು ಬುದ್ದಿವಂತಿಗೆ ಮೆಚ್ಚಿ ಖುರ್‍ರಂನಿಗೆ ಷಹಾಜಹಾನ್ (ಚಕ್ರವರ್ತಿ ಅಥವಾ ಜಗದೊಡೆಯ) ಎಂಬ ಬಿರುದು ಮತ್ತು ಅನೇಕ ಜಹಗೀರುಗಳು ಬಹುಮಾನವಾಗಿ ನೀಡಿದನು.
- ಕಾಂಗ್ರಾದ ವಿಜಯಕ್ಕಾಗಿ 30,000 ಜಾಟ್ 20,000 ಸರದಾರರ ಮನ್ಸಬ್‌ದಾರನಾಗಿ ನೇಮಕ

**4. ವೈವಾಹಿಕ ಜೀವನ - ಖುರ್‍ರಾಮ್ ರ ವಿವಾಹಗಳು**

ಖುರ್‍ರಾಮ್ ತನ್ನ ಮೊದಲ ವಿವಾಹವನ್ನು ಪರ್ಷಿಯಾದ ರಾಜಕುಮಾರಿಯ ಕಂದಹರಿ ಬೇಗಂ ಅವರೊಂದಿಗೆ ನಡೇಯಿತು. ಅವನು ತನ್ನ ಮೊದಲ ಮಗು, ಮಗಳನ್ನು ಅವಳೊಂದಿಗೆ ಹೊಂದಿದ್ದನು. ನಂತರ ಅವರು 1612 ರಲ್ಲಿ ಮುಮ್ತಾಜ್ ಮಹಲ್ ಅವರನ್ನು ಮದುವೆಯಾಗುವ ಮೊದಲು ಇನ್ನೊಬ್ಬ ರಾಜಕುಮಾರಿಯನ್ನು ಮದುವೆಯಾದರು. ಅವರ ಮೊದಲ ಎರಡು ವಿವಾಹಗಳಿಂದ ಇಬ್ಬರು ಮಕ್ಕಳನ್ನು ಜನಿಸಿದ ನಂತರ, ಅವರು ತಮ್ಮ ನೆಚ್ಚಿನ ಪತ್ನಿ ಮುಮ್ತಾಜ್ ಅವರೊಂದಿಗೆ ಹದಿನಾಲ್ಕು ಮಕ್ಕಳನ್ನು ಜನಿಸಿದರು. ಅವರು ಅಕ್ಬರಬಾದಿ ಮಹಲ್ ಮತ್ತು ಮುತಿ ಬೇಗಂ ಎಂಬ ಇಬ್ಬರು ಮಹಿಳೆಯರನ್ನು ಸಹ ಮದುವೆಯಾದರು, ಆದರೆ ಈ ವಿವಾಹಗಳು ರಾಜಕೀಯ ಕಾರಣಗಳಿಗಾಗಿ ಮತ್ತು ಅಂತಹ ಕಾರಣಗಳಿಗಾಗಿ ಅವರು ಮದುವೆಯಾದ ಮಹಿಳೆಯರನ್ನು 'ರಾಜ ಹೆಂಡತಿಯರು ' ಎಂದು ಪರಿಗಣಿಸಲಾಗಿದೆ ಎಂದು ಹೇಳಲಾಗುತ್ತದೆ. ಒಟ್ಟು 16 ಜನ ರಾಣಿಯರು ಮತ್ತು ಅನೇಕ ಜನ ಉಪಪತ್ನಿಯರು ಹೊಂದಿದ್ದನು

**5. ಸಿಂಹಾಸನಕ್ಕಾಗಿ ಹೋರಾಟ**

- ಜಹಾಂಗೀರನ ಮದ್ಯಪಾನ ಇತರ ನಶೆಯದಾಸನಾಗಿಆಡಳಿತವನ್ನು ನೂರಜಹಾನಳಿಗೆ ಒಪ್ಪಿಸಿದ್ದನು.
- ಅಧಿಕಾರದ ರುಚಿ ನೋಡಿದ ನೂರಜಹಾನ ತನ್ನ ಅಧಿಕಾರವನ್ನು ಶಾಸ್ವತಗೋಳಿಸಿಕೊಳ್ಳಲು, ಅತ್ಯಂತ ಮಹಾತ್ವಕಾಂಕ್ಷಿಯಾಗಿದ್ದ ಮತ್ತು ಸಮರ್ಥನಾಗಿದ್ದ ಷಹಾಜಹಾನನ ಶಕ್ತಿ ಕುಂದಿಸಲು ಪ್ರಯತ್ನ ಪ್ರಾರಂಭ
- ಇದರಿಂದ ಷಹಾಜಹಾನನು ದಂಗೆ 1623- 26

- ಫರ್ವೇಜಜ್, ಮಹಬತ್‌ಖಾನರ ಸಹಾಯದಿಂದ ಷಹಾಜಹಾನಿಗೆ ಸೋಲಿಸಿದ್ದು
- ಕೊನೆಗೆ ಸೋತ ಷಹಜಹಾನ ತನ್ನ ಮಾವನಾದ ಅಸಫತ್‌ಖಾನ ಸಲಹೆಯಂತೆ ಶರಣಾಗತನಾದನು.
- ಫರ್ವೇಜಜ್ ಮತ್ತು ಮಹಬತತಖಾನರನ್ನು ಒಳಸಂಚಿನ ಮೂಲಕ ಕೋನೆಗೋಳಿದ್ದು
- ಶಾರೀರ್‌ನಿಗೆ ತನ್ನ ಮಗಳನ್ನು ನೀಡಿ ಮದುವೆ ಮಾಡಿ ಅವನನ್ನು ಸಿಂಹಾಸನಕ್ಕಾಗಿ ತರಲು ಯೋಜನೆ ಅದಕ್ಕಾಗಿ ಸಹೋದರ ಅಸಫತ್‌ಖಾನ ಸಹಾಯ

ಒಳ್ಳೆಯ ಸ್ಥಾನದಲ್ಲಿದ್ದ ಅಸಫಖಾನ ನೂರಜಹಾನಳ ಪಕ್ಕ ಬೆಂಬಲಿಗನಂತೆ ನಟಿಸುತ್ತಾ ಷಹಜಹಾನನ ಪರವಾಗಿದ್ದ ಅನೇಕ ದಂಡನಾಯಕರುಗಳನ್ನು ಆಯಕಟ್ಟಾದ ಹುದ್ದೆಗಳಿಗೆ ನೇಮಿಸಿ ರಹಸ್ಯವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಜಹಾಂಗೀರ ಇನ್ನೂ ಹೆಚ್ಚು ಬದಕುವದಿಲ್ಲವೆಂದು ತಿಳಿದ ಮೇಲೆ ಶಾರೀಯರನನ್ನು ಲಾಹೋರದ ದಂಗೆಯನ್ನಡಗಿಲು ಕಳುಹಿಸಿದನು. ಮತ್ತು ದಕ್ಷಿಣದಲ್ಲಿದ್ದ ತನ್ನಳಿಯನಾದ ಷಹಜಹಾನನನ್ನು ಶೀಘ್ರವಾಗಿ ದೆಹಲಿಗೆ ಬರಲು ಸೂಚಿಸಿದನು. ಕಾಶ್ಮೀರದಿಂದ ವಾಪಸ ಬರುವಾಗ 1627 ನವ್ಹಂಬರ 23 ರಂದು ಭೀಮಬರ ಎಂಬಲ್ಲಿ ಜಹಾಂಗೀರ ಮರಣ ಹೊಂದಿದನು. ನೂರಜಹಾನ ಶೋಕಚರಣೆಯಲ್ಲಿರುವಾಗ ಅವಳ ವಶದಲ್ಲಿದ್ದ ಧಾರಾ ಮತ್ತು ಔರಂಗಜೇಬರನ್ನು ತನ್ನ ವಶಕ್ಕೆ ತಗೆದುಕೊಂಡನು. ಶಾರೀಯರನನ್ನು ದೆಹಲಿಗೆ ಬರುವಂತೆ ಹೇಳಿ ದಾರಿ ಮಧ್ಯದಲ್ಲಿಯೇ ಅವನನ್ನು ಬಂದಿಸಿ ಕೊಂದು ಹಾಕಿದನು. ಖುಸ್ರುವಿನ ಮಕ್ಕಳನ್ನು ಮತ್ತು ರಾಜಕುಟುಂಬದ ಎಲ್ಲಾ ವಾರಸುದಾರರನ್ನು ರಾತ್ರೋರಾತ್ರಿ ಕಗ್ಗೊಲೆ ಮಾಡಿಸಿದನು. ನೂರಜಹಾನಳ ಅರಿವಿಗೆ ಬರುವದಕ್ಕಿಂತ ಮುಂಚೆಯೇ ಷಹಜಹಾನನು ಉತ್ತರಾಧಿಕಾರಿಯಾಗಿ ನೇಮಿಸಿ, ಬಾದಷಹಾ ಎಂದು ಘೋಷಣೆ ಮಾಡಿದನು. ವಿಧುವೆ ನೂರಜಹಾನಳನ್ನು ಮತ್ತು ಅವಳ ವಿಧುವೆ ಮಗಳಿಗೆ ವಾರ್ಷಿಕ 2 ಲಕ್ಷ ರೂಪಾಯಿಗಳನ್ನು ನೀಡಿ ಗೃಹ ಬಂದನದಲ್ಲಿರಿಸಿದನು.

**6. ಸಿಂಹಾಸನರೋಹಣ**

ಷಹಜಹಾನನು ಜನವರಿ 19, 1628 ರಂದು ಮೊಘಲ್ ಸಿಂಹಾಸನವನ್ನು ವಿಧಿವತ್ತಾಗಿ ಅಲಂಕರಿಸಿ "ಅಬ್ದುಲ್ ಮುಜಾಫರ್ ಶಿಹಾಬುದ್ದಿನ್ ಮಹಮ್ಮದ್ ಸಾಹಿಬ್ ಕ್ವಿರಾನ್ ಸನಿ ಶಹಜಹಾನ್ ಬಾದಶಹಾ ಘಾಜಿ" ಎಂಬ ಬಿರುದನ್ನು ಧರಿಸಿದನು. ಈ ಸಂದರ್ಭದಲ್ಲಿ ತನ್ನ ನಿಷ್ಠ ಸರದಾರರಿಗೆ ಮತ್ತು ವಿದ್ವಾಂಸರಿಗೆ ಬಹುಮಾನ ಮತ್ತು ಪಾರಿತೋಷಕಗಳನ್ನು ನೀಡಿ ಗೌರವಿಸಿದನು. ತನ್ನ ಮಕ್ಕಳಾದ ಔರಂಗಜೇಬ್, ದಾರ ಶುಕೋಹ್, ಷಾ ಶೂಜಾ, ಮುರಾದ್ ಬಕ್ಷ್, ಸಾಮ್ರಾಜ್ಯದ ಪ್ರಮುಖ ನಾಲ್ಕು ವಿಭಾಗಗಳ ರಾಜ್ಯಪಾಲರಾಗಿ ನೇಮಕ ಮಾಡಿದನು.

**ಸೈನಿಕ ಸಾಧನೆಗಳು**

1. ಬುಂದೇಲ್‌ಖಂಡದ ದಂಗೆಯ ದಮನ (ಅಕ್ಬರ ಮಿತ್ರ ಅಬುಲ್ ಫಜಲ್‌ನ ಕೊಲೆ ಮಾಡಿದ ಭೀಮ್‌ಸಿಂಗ್‌ನಿಗೆ ವಿಶೇಷ ಸವಲತ್ತು ಗಳನ್ನು ಜಹಾಂಗೀರನು ನೀಡಿದ್ದನು. ಆದರೆ ಅವನ ಮಗ ಜೂಜರ್‌ಸಿಂಗ್ ಮತ್ತು ಮೊಮ್ಮಗ ವಿಕ್ರಮಜೀತ್ ತಾವು ಪಡೆದ ವಿಶೇಷ ಸವಲತ್ತು ಗಳನ್ನು ದುರುಪಯೋಗ ಪಡಿಸಿಕೊಂಡು ಸ್ವತಂತ್ಯದೊರೆಗಳಂತೆ ವರ್ತಿಸುತ್ತಿದ್ದು ಬಾದಷಹಾ ಷಹಜಾನನ ವಿರುದ್ಧ ದಂಗೆ ಎದ್ದರು. ಈ ದಂಗೆಯನ್ನು1628 ರಿಂದ 1630 ರವರೆಗೆ ಹತ್ತಿಕ್ಕಿದನು.

2. ಖಾನ ಜಹಾನ ಲೋದಿಯ ದಂಗೆಯ ದಮನ 1631 ಜಹಾಂಗಿರ ಮತ್ತು ನೂರಜಹಾನಳ ವಿರುದ್ಧ ಷಹಜಹಾನ ದಂಗೆ ಎದ್ದಾಗ ಈ ಖಾನ ಜಹಾನ ಲೋದಿಯು ಷಹಜಹಾನನಿಗೆ ಬಹಳಷ್ಟು ಅವಮಾನ ಮಾಡಿದ್ದನು.

3. ಪೋರ್ಚಗಿಸ್‌ರೊಡನೆ ಹೋರಾಟ 1632 ಮೊಘಲರ ಆಶ್ರಯದಲ್ಲಿ ವ್ಯಾಪಾರ ಮಾಡುತ್ತಿದ್ದ ಇವರು ಅಧಿಕ ತೆರಿಗೆ ಮತ್ತು ಬಲವಂತದ ಕ್ರಿಶ್ಚನ್ ಧರ್ಮಕ್ಕೆ ಮುಸ್ಲಿಂರ ಮತಾಂತರ, ಸ್ತ್ರೀಯರ ಅಪಹರಣ ಕಾರ್ಯದಲ್ಲಿ ತೊಡಗಿದ್ದರು.

4. ಸಿಖ್ಖರೊಂದಿಗೆ ಕಲಹ 1631 ಸಿಖ್ಖರ ಗುರು ಗೋವಿಂದಸಿಂಗ್ ಹಿಂದು ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಬಲವಂತಾಗಿ ಮತಾಂತರಗೊಂಡ ಮುಸ್ಲಿಂರನ್ನು ಸಿಖ್ಖ ಧರ್ಮಕ್ಕೆ ಸ್ವಾಗತಿಸಿ ಸಿಖ್ಖರನ್ನಾಗಿ ಮಾಡಿದನು.

5. ಕಂದಹಾರ ಮೇಲೆ ದಂಡೆಯಾತ್ರೆ 1638 ಪರ್ಷಿಯಾದ ವಶದಲ್ಲಿದ್ದ ಕಂದಹಾರನ್ನು ತನ್ನ ಮಕ್ಕಳಾದ ಮುರಾದ ಮತ್ತು ಔರಂಗಜೇಬರ ಮೂಲಕ ಪಡೆದನು

6. ಬಾಲ್ಕನ್ ಮೇಲೆ ದಂಡಯಾತ್ರೆ 16423 -1647 ಅದೇ ರೀತಿ ಬಾಲ್ಕನ್ ಪಡೆದನು

7. ಕಂದಹಾರ ಕಳೆದು ಕೊಂಡಿದ್ದು 1648 ಸಿಂಹಾಸನಕ್ಕಾಗಿ ತನ್ನ ಮಕ್ಕಳಲ್ಲಿ ಆಂತರಿಕ ವೈಮನಸ್ಸನಿಂದಾಗಿ ಕಂದಹಾರನ್ನು ಕಳೆದುಕೊಂಡನು .

8. ದಕ್ಷಿಣದ ನೀತಿ ತನ್ನ ತಾತ ಅಕ್ಬರ ಮತ್ತು ತಂದೆ ಜಹಾಂಗಿರರಿಂದ ಪ್ರಾರಂಭವಾಗಿದ್ದ ದಕ್ಷಿಣದ ಸಾಮ್ರಾಜ್ಯ ವಿಸ್ತರಣಾ ಕಾರ್ಯವನ್ನು ಮುಂದುವರಿಸಿದನು. ದಕ್ಷಿಣದ ರಾಜ್ಯಗಲಾದ ಅಹ್ಮದನಗರ, ಗೋಲಕೊಂಡ, ಬಿಜಾಪುರುಗಳು ಅತಿ ಶ್ರೀಮಂತ ಷಿಯಾರಾಜ್ಯಗಳಾಗಿದ್ದವು ಅಹ್ಮದನಗರವನ್ನು ನಿಜಾಮ್‌ಷಾಹಿ ಮನೆತನದ ಎರಡನೇ ಮುರ್ತಾಜಾ ಆಳುತ್ತಿದ್ದನು. ಎರಡನೇ ಮುರ್ತಾಜಾನನ್ನು ಅವನ ಪ್ರಧಾನಿ ಮಂತ್ರಿಯಾದ ಫತೇಖಾನ ಕೊಲೆಮಾಡಿ, ಅವನ ಮಗ 8 ವರ್ಷದ ಹುಸೇನ್ ಸಾಹನನ್ನು ಸಿಂಹಾಸನಕ್ಕೆ ಕೂಡಿಸಿ ಆಡಳಿತ ಕೈಗೆ ತಗೆದುಕೊಂಡಿದ್ದನು.ಇದರಿಂದ ಸಾಮ್ರಾಜ್ಯದಲ್ಲಿ ಅರಾಜಕತೆ ಉಂಟಾಗಿತ್ತು ಇದರ ಲಾಭ ಪಡೆದು ಷಹಜಹಾನ ತನ್ನ ಮಗ ಔರಂಗಜೇಬನ ಮೂಲಕ ಅಹ್ಮದನಗರವನ್ನು ಸಂಪೂರ್ಣವಾಗಿ ವಶಪಡಿಕೊಂಡನು.

9. ಗೊಲ್ಕೊಂಡದ ಅಬ್ದುಲ್‌ಕುತುಬ್‌ಷಹ ಶರಣಾದನು

10. ಬಿಜಾಪುರದ ಅಲಿಆದಿಲ್‌ಷಹಾ ಆದರೆ ಬಿಜಾಪುರದ ಅಲಿಆದಿಲ್‌ಷಹಾ ಶರಣಾಗತನಾಗದೇ
ಯುದ್ಧ ಮಾಡಿ ಸೋತು ಒಪ್ಪಂದ ಮಾಡಿಕೊಂಡನು

## ಮೊಘಲರ ವಾಸ್ತುಶಿಲ್ಪಕ್ಕೆ ಷಹಜಹಾನನ ಕೊಡುಗೆಗಳು.

" ಮೊಘಲರ ವಾಸ್ತುಶಿಲ್ಪದ ಸುವರ್ಣಯುಗ ಎಂದು ಪರಿಗಣಿಸಲಾಗುತ್ತದೆ "

ಷಹಜಹಾನನ ಆಳ್ವಿಕೆಯ ಕಾಲದಲ್ಲಿ ವಾಸ್ತುಶಿಲ್ಪದ ಬೆಳವಣಿಗೆಯನ್ನು ಆಧರಿಸಿ ಇತನ ಕಾಲವನ್ನು "ವಾಸ್ತುಶಿಲ್ಪದ ಸುವರ್ಣಯುಗ " ಎಂದು ಕರೆಯಲಾಗಿದೆ. ಇವನನ್ನು "ಸೌಧಗಳ ಸಾಮ್ರಾಟ "  ಎಂತಲೂ ಕರೆಯುತ್ತಿದ್ದರು. ಇತನ ಕಾಲದ ಸೌಧಗಳು, ಅರಮನೆಗಳು, ಹೂದೋಟಗಳು, ಗೋರಿಗಳು, ಅವನ ಶಿಲ್ಪಕಲಾ ಪ್ರೌಡಿಮೆಯನ್ನು ಪ್ರತಿಬಿಂಬಿಸುತ್ತದೆ. ಷಹಜಹಾನನ ಆಡಳಿತದ ಕಾಲದಲ್ಲಿ ಮೊಘಲ್ ಸಾಮ್ರಾಜ್ಯದ ವೈಭವ ಉತ್ತುಂಗ ಶಿಖರಕ್ಕೇರಿತ್ತು. ವಿಶಾಲವಾದ ಸಾಮ್ರಾಜ್ಯದಲ್ಲಿ ದಕ್ಷ ಆಡಳಿತದ ಫಲವಾಗಿ ಸಾಮ್ರಾಜ್ಯದಲ್ಲಿ ಸುಖ, ಶಾಂತಿ, ಸಂತೋಷ, ಸುವ್ಯವಸ್ಥೆ, ನೆಲೆಸಿದ್ದರಿಂದ ಕಲೆ-ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರವು ಅಪಾರ ಪ್ರಮಾಣದಲ್ಲಿ ಪ್ರಗತಿಯಾಯಿತು. 1628 ರಲ್ಲಿ ಪಟ್ಟಕ್ಕೆ ಬಂದ ಷಹಜಹಾನನು ಅನೇಕ ರಾಜ್ಯಗಳನ್ನು ಗೆದ್ದು, ಅನೇಕ ನಗರಗಳನ್ನು ಲೂಟಿ ಮಾಡಿ, ತನ್ನ ರಾಜಭಂಡಾರವನ್ನು ಅಪೂರ್ವ ಮುತ್ತು, ರತ್ನ, ವಜ್ರ, ವೈಡರ್ೂಯ, ಚಿನ್ನ ಮತ್ತು ಬೆಳ್ಳಿಯಿಂದ ತುಂಬಿದನು. ಅಗಣಿತ ಸಂಪತ್ತನ್ನು ಒಳಗಿಟ್ಟು ಮಾಡುವದೇನೆಂದು ಯೋಚಿಸಿ - ಅದಕ್ಕಾಗಿ ಅಪಾರ ಪ್ರಮಾಣದಲ್ಲಿ ಹಣವನ್ನು ಖರ್ಚುಮಾಡಿ ಅಧ್ಬುತವಾದ ಭವ್ಯ ಕಟ್ಟಡಗಳನ್ನು ನಿರ್ಮಿಸಿದನು. ಇವನು ಸುಮಾರು 500 ಕಟ್ಟಡಗಳನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಕೆಲವು ಪ್ರಮುಖ ಕಟ್ಟಡಗಳು ಈ ಕೆಳಗಿನಂತಿವೆ.

**ಮಯೂರ ಸಿಂಹಾಸನ**

ಮಯೂರ ಸಿಂಹಾಸನ ಮನೋಹರವಾದ ಸಿಂಹಾಸನ ಒಂದನ್ನು ಮಾಡಿಸಬೇಕೆಂದು ನಿರ್ಧರಿಸಿ ಸುಮಾರು 1648ರಲ್ಲಿ ಅದ್ಭುತ ಸಿಂಹಾಸನದ ರಚನೆಗೆ ಆದೇಶವಿತ್ತ. ಇದಕ್ಕೆ 50,000 ಮಿನ್ನಾಳ ತೂಕದ ವಜ್ರಗಳನ್ನು (ಆಗ ಇದರ ಬೆಲೆ 30 ಲಕ್ಷ ರೂಪಾಯಿ) ಆರಿಸಿ, ಲಕ್ಷ ತೊಲ ಶುದ್ಧ ಚಿನ್ನ (ಆಗ ಇದರ ಬೆಲೆ 14 ಲಕ್ಷ ರೂಪಾಯಿ) ಕೊಟ್ಟು, ಪ್ರತಿದಿನ ಬಂದು ಸಿಂಹಾಸನದ ಕೆಲಸ ಪರಿಶೀಲಿಸಿ ಸಲಹೆ ನೀಡುತ್ತಿದ್ದನಂತೆ ಷಾಜಹಾನ್. ಆರು ಅಡಿ ಉದ್ದ ಹಾಗೂ ನಾಲ್ಕು ಅಡಿ ಅಗಲ ಎಂಟು ಅಡಿ ಎತ್ತರವಿರುವ ಬಂಗಾರದ ಸಿಂಹಾಸನದ ಮೆಟ್ಟಿಲು ಬೆಳ್ಳಿಯದು. ಕೆಂಪು ಮಖಮಲ್ ನ ಬಟ್ಟೆ ಸುತ್ತಿದ ಹಿಡಿಕೆಯುಳ್ಳ, ಎಂಟು ಅಡಿ ಎತ್ತರದ ರಾಜಛತ್ರಿಯ ಸುತ್ತಲೂ ಮುತ್ತು

ರತ್ನಗಳು ಜೋಲಾಡುತ್ತಿದ್ದವು. ಛತ್ರಿಯನ್ನು ಆಧರಿಸಿ ಸುತ್ತಲೂ 12 ಕಂಬಗಳು, ಕಂಬಗಳ ನಡುವೆ ಕೆಂಪು ಮಖಮಲ್ ಬಟ್ಟೆ, ಇದರಲ್ಲಿ ಕುಸುರಿ ಕೆಲಸ. ಕಮಾನು, ಛಾವಣಿ, ಕಂಬ ಎಲ್ಲಕ್ಕೂ ಚಿನ್ನದ ತಗಡಿನ ಹೊದಿಕೆ ಇದರ ಮೇಲೆ ಮುತ್ತು ರತ್ನಗಳನ್ನು ಹುದುಗಿಸಿದ ಕುಸುರಿ ಕೆಲಸ. ಹನ್ನೆರಡು ಕಂಬಗಳಿಗೂ ಪ್ರತಿಯೊಂದರ ಮೇಲೂ ಒಂದಕ್ಕೊಂದು ಬೆನ್ನು ತಾಗಿಸಿ ಕುಳಿತ ಎರಡೆರಡು ನವಿಲುಗಳು. ನವಿಲಿನ ಗರಿಯಲ್ಲಿರುವ ಕಣ್ಣುಗಳಿಗೆ ನೀಲ ಮತ್ತಿತರ ರತ್ನಗಳ ಜೋಡಣೆ, ನವಿಲಿನ ಮೈತುಂಬ ರತ್ನ ಹುದುಗಿಸಿದ ಬಂಗಾರದ ತಗಡು, ಎದೆಯಲ್ಲಿ ಕೆಂಪುರತ್ನ, ಪ್ರತಿ ನವಿಲಿನ ಕೊಕ್ಕಿನಿಂದ ಇಳಿ ಬಿದ್ದಿರುವ ಒಂದು 50 ಕ್ಯಾರೆಟ್ ತೂಕದ ಮುತ್ತು, ನವಿಲಿನ ಎರಡೂ ಪಕ್ಕಗಳಲ್ಲಿ ಅಷ್ಟೇ ಎತ್ತರವಾದ ರತ್ನ ಖಚಿತ ಚಿನ್ನದ ಹೂಗುಚ್ಛಗಳು; ಛತ್ರಿಯ ಕೆಳಗೆ, ಸಿಂಹಾಸನದ ಮೇಲೆ ಹಾಸಿಗೆ ಮತ್ತು ಒರಗು ದಿಂಬು, ಆಸನದ ಸುತ್ತಲೂ ಮತ್ತು ಕಾಲುಗಳಿಗೆ ಬಂಗಾರದ ತಗಡಿನ ಮೇಲೆ ಮುತ್ತು ಮತ್ತು ಮಾಣಿಕ್ಯಗಳಿಂದ ಮಾಡಿದ ಹೂವಿನಾಕಾರದ ಚಿತ್ತಾರಗಳು. ಕಣ್ಣುಗಳು ತಪ್ಪವಾದವು? `ಈ ರೀತಿಯ ಮಯೂರ ಸಿಂಹಾಸನ 1665ರಲ್ಲಿ ಪೂರ್ಣಗೊಂಡಿತು. ಷಾಜಹಾನ್ ಆ ವರ್ಷ ಮಾರ್ಚ್ ತಿಂಗಳಲ್ಲಿ ವೈಭವದಿಂದ ಮಯೂರ ಸಿಂಹಾಸನವನ್ನೇರಿದ. ದೆಹಲಿಯ ಕೆಂಪು ಕೋಟೆಯ ಮುಖ್ಯದ್ವಾರದ ಆಚೆ ತುದಿಯಲ್ಲಿ ಸಿಗುವ ದಿವಾನ್-ಇ-ಆಮ್ ನಲ್ಲಿರುವ ಅಮೃತ ಶಿಲೆಯ ಸಿಂಹಾಸನ ಪೀಠ ಮತ್ತು ಅಮೃತ ಶಿಲೆಯ ಛತ್ರಿಯ ಕೆಳಗೆ ದಿವ್ಯಾಲಂಕಾರ ಭೂಷಿತನಾದ ಶಹಾಜಹಾನ ಮಯೂರ ಸಿಂಹಾಸನಾ ರೂಢನಾಗಿ, ದಿನಕ್ಕೆ ಎರಡು ಬಾರಿ ದರ್ಬಾರು ನಡೆಸುತ್ತಿದ್ದನಂತೆ. ಮೊಘಲ್ ಚಕ್ರವರ್ತಿಗಳ ಎಣೆಯಿಲ್ಲದ ಐಶ್ವಾರ್ಯ, ಕಲಾಭಿಜ್ಞತೆ ಹಾಗೂ ಕುಶಲಕರ್ಮಿಗಳ ಜಾಣ್ಮೆಗೆ ಸಾಕ್ಷಿಯಂತಿದ್ದ ಮಯೂರ ಸಿಂಹಾಸನವನ್ನು, 1739ರಲ್ಲಿ ಪರ್ಷಿಯಾದ (ಇಂದಿನ ಇರಾನಿನ) ನಾದಿರ್ ಷಾ ದಾಳಿಮಾಡಿ, ದೆಹಲಿಯ ಮಹಮ್ಮದ ಷಾನನ್ನು ಸೋಲಿಸಿ ವಿಜಯ ಸಾಧಿಸಿದ ಪ್ರತೀಕವಾಗಿ, ಪರ್ಷಿಯಕ್ಕೆ ಹಿಂದಿರುಗುವಾಗ 15 ಕೋಟಿ ರೂಪಾಯಿ ನಗದು, ಕೊಹಿನೂರ್ ವಜ್ರ, ಮಯೂರ ಸಿಂಹಾಸನ, ಅರಮನೆಯ ಎಲ್ಲ ವಸ್ತುಗಳನ್ನು ಕೊಳ್ಳೆ ಹೊಡೆದು, ಹೊತ್ತೊಯ್ದ.

**ತಾಜ್ ಮಹಲ್**

ತಾಜ್ ಮಹಲ್ ಭಾರತದ ಆಗ್ರಾದಲ್ಲಿರುವ ಭವ್ಯ ಸಮಾಧಿಯಾಗಿದೆ. ಇದನ್ನು ಮೊಘಲ್ ಚಕ್ರವರ್ತಿ ಷಹ ಜಹಾನ್ ತನ್ನ ಮೆಚ್ಚಿನ ಪತ್ನಿ ಮಮ್ತಾಜ್ ಮಹಲ್‌ಳ ನೆನಪಿಗಾಗಿ ಕಟ್ಟಿಸಿದನು. ಪರ್ಷಿಯನ್, ಭಾರತೀಯ ಮತ್ತು ಮುಸ್ಲಿಂ ವಾಸ್ತುಶೈಲಿಗಳ ಸಮ್ಮಿಶ್ರಣವಾದ ಮೊಘಲ್ ವಾಸ್ತುಶೈಲಿಗೆ ತಾಜ್ ಮಹಲ್ ("ತಾಜ್" ಎಂದೂ ಕರೆಯಲ್ಪಡುತ್ತದೆ) ಅತ್ಯುತ್ತಮ ಉದಾಹರಣೆಯೆಂದು ಪರಿಗಣಿಸಲಾಗಿದೆ 1983ರಲ್ಲಿ ತಾಜ್ ಮಹಲ್ Uಓಇಖಅಔದ ವಿಶ್ವ ಪರಂಪರೆ ತಾಣವಾಗಿ ಗುರುತಿಸಲ್ಪಟ್ಟಿತು ಮತ್ತು ಇದನ್ನು "ಭಾರತದಲ್ಲಿರುವ ಮುಸ್ಲಿಂ ಕಲೆಯ ಅನರ್ಘ್ಯ ರತ್ನ ಮತ್ತು ಜಾಗತಿಕವಾಗಿ ಮೆಚ್ಚುಗೆಯನ್ನು ಪಡೆದ ವಿಶ್ವ ಪರಂಪರೆಯ ಮೇರುಕೃತಿಗಳಲ್ಲಿ ಒಂದು" ಎಂದು ಉಲ್ಲೇಖಿಸಲಾಗಿದೆ. ತಾಜ್ ಮಹಲ್ ವಾಸ್ತವವಾಗಿ ಅನೇಕ ಸಂರಚನೆಗಳ ಒಂದು ಸಮಗ್ರ ಸಂಕೀರ್ಣವಾಗಿದ್ದು, ಗೌರವರ್ಣದ ಗುಮ್ಮಟಾಕಾರದ ಅಮೃತಶಿಲೆಯ ಭವ್ಯ ಸಮಾಧಿಯು ಇದರ ಅತ್ಯಂತ ಸುಪರಿಚಿತ ಭಾಗವಾಗಿದೆ. ಈ ಕಟ್ಟಡದ ನಿರ್ಮಾಣ ಕಾರ್ಯವು 1632ರಲ್ಲಿ ಪ್ರಾರಂಭವಾಗಿ, ಸರಿಸುಮಾರು 1653ರ ಹೊತ್ತಿಗೆ ಪೂರ್ಣಗೊಂಡಿತು. ಈ ಭವ್ಯ ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ಸಾವಿರಾರು ಕುಶಲಕರ್ಮಿಗಳು ಮತ್ತು ನುರಿತ ಕೆಲಸಗಾರರನ್ನು ಬಳಸಿಕೊಳ್ಳಲಾಗಿತ್ತು. ತಾಜ್ ಮಹಲ್‌ನ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಗೆ ಅಬ್ದ್ ಉಲ್-ಕರೀಮ್ ಮಾಮುರ್ ಖಾನ್, ಮಖ್ರಾಮತ್ ಖಾನ್ ಮತ್ತು ಉಸ್ತಾದ್ ಅಹ್ಮದ್ ಲಹೌರಿ ಸೇರಿದಂತೆ ಇನ್ನೂ ಕೆಲವರನ್ನು ಒಳಗೊಂಡಂತೆ ವಾಸ್ತುಶಿಲ್ಪಿಗಳ ಮಂಡಳಿಗೆ ನೇಮಿಸಲಾಗಿತ್ತು. ಅವರಲ್ಲಿ ಲಹೌರಿರವರನ್ನು ತಾಜ್ ಮಹಲ್ ನಿರ್ಮಾಣದ ಪ್ರಧಾನ ಶಿಲ್ಪಿ ಎಂದು ಸ್ಥೂಲವಾಗಿ ಪರಿಗಣಿಸಲಾಗಿದೆ.

**ಕೆಂಪು ಕೋಟೆ**

ಕೆಂಪು ಕೋಟೆ ತನ್ನ ಇಂದಿನ ರೂಪ ಪಡೆದದ್ದು ಷಾ ಜಹಾನನ ಕಾಲದಲ್ಲಿ. ಷಾ ಜಹಾನ್ ನ ಕಾಲದ ಶಿಲ್ಪಕಲೆ ಶ್ವೇತ ಅಮೃತಶಿಲೆಯನ್ನು ಹೆಚ್ಚಾಗಿ ಉಪಯೋಗಿಸುತ್ತಿತ್ತು (ಉದಾಹರಣೆಗೆ ತಾಜ್ ಮಹಲ್). ಷಾ ಜಹಾನ್ ಇಲ್ಲಿದ್ದ ಕೆಲವು ಕಟ್ಟಡಗಳನ್ನು ಉರುಳಿಸಿ ತನ್ನವೇ ಆದ ಹೊಸ ಕಟ್ಟಡಗಳನ್ನು ನಿರ್ಮಿಸಲು ಆರಂಭಿಸಿದ. ನಂತರದ ವರ್ಷಗಳಲ್ಲಿ ಷಾ ಜಹಾನ್ ನ ಮಗ ಔರಂಗಜೇಬ್ ಷಾ ಜಹಾನನನ್ನು ಇದೇ ಕೆಂಪು ಕೋಟೆಯಲ್ಲಿ ಬಂಧನದಲ್ಲಿರಿಸಿದ. ನಂಬಿಕೆಯಂತೆ, ಷಾ ಜಹಾನ್ ನಿಧನನಾಗಿದ್ದು

ಕೆಂಪು ಕೋಟೆಯ ಮುಸಮ್ಮನ್ ಬುರ್ಜ್ ಎಂಬ ಗೋಪುರದಲ್ಲಿ - ಇದು ಅಮೃತಶಿಲೆಯಿಂದ ನಿರ್ಮಿಸಲ್ಪಟ್ಟಿದ್ದು ತಾಜ್ ಮಹಲ್ ನ ಅದ್ಭುತ ದೃಶ್ಯ ಇಲ್ಲಿಗೆ ಕಾಣುತ್ತದೆ. ಇಡೀ ಕೋಟೆ ಅರ್ಧಚಂದ್ರಾಕಾರವಾಗಿದ್ದು, ಕೋಟೆ ಗೋಡೆಗಳು 21 ಮೀ ಎತ್ತರ ಇವೆ. ಕೋಟೆಯ ಸುತ್ತಲೂ ಒಂದು ಕಾಲುವೆ ಹರಿಯುತ್ತದೆ. ಮುಖ್ಯ ದ್ವಾರ (ದೆಹಲಿ ದ್ವಾರ) ಯಮುನಾ ನದಿಯ ಕಡೆಗಿದೆ. ಕೋಟೆಯ ಸುತ್ತಳತೆ 2.4 ಕಿಮೀ. ಕೋಟೆಯಲ್ಲಿ ಎರಡು ದ್ವಾರಗಳಿವೆ - ದೆಹಲಿ ದ್ವಾರ ಮತ್ತು ಲಾಹೋರ್ ದ್ವಾರ. ಶಿಲ್ಪಕಲೆಯ ದೃಷ್ಟಿಯಿಂದ ಈ ಕೋಟೆಯಲ್ಲಿ ಹಿಂದೂ ಮತ್ತು ಮುಸ್ಲಿಮ್ ಶೈಲಿಗಳ ಸಮಾಗಮವನ್ನು ಕಾಣಬಹುದು. ಒಟ್ಟಾರೆ ಶಿಲ್ಪಕಲೆ ಮುಸ್ಲಿಮ್ ಶೈಲಿಗಳಿಂದ ಸ್ಫೂರ್ತಿ ಪಡೆದಿದ್ದರೂ, ಕೆಲವು ಅಲಂಕಾರಗಳಲ್ಲಿ ಹಿಂದೂ ಶಿಲ್ಪಕಲೆಯ ಪ್ರಭಾವವನ್ನು ಕಾಣಬಹುದು.

**ಮೋತಿ ಮಸೀದಿ,**

ಮೋತಿ ಮಸೀದಿಯನ್ನು ಭಾರತದಲ್ಲಿ ಸ್ಮಾರಕಗಳ ನಿರ್ಮಾಣದಲ್ಲಿಯು ಸಹ ಚಕ್ರವರ್ತಿಯಾದ ಮೊಘಲ್ ಸಾಮ್ರಾಟ ಶಹ ಜಹಾನ್ ನಿರ್ಮಿಸಿದನು. ಇದನ್ನು ಮುತ್ತಿನ ಮಸೀದಿಯೆಂದು ಸಹ ಕರೆಯುತ್ತಾರೆ. ಇಲ್ಲಿನ ಪವಿತ್ರವಾದ ಪೀಠವು ಬೃಹತ್ ಮುತ್ತಿನಂತೆ ಹೊಳೆಯುತ್ತಿರುತ್ತದೆ. ಹಾಗಾಗಿ ಇದಕ್ಕೆ ಈ ಹೆಸರು ಬಂದಿದೆ.

ಆಗ್ರಾದ ಜಾಮಿಯ ಮಸೀದಿ

ದೆಹಲಿಯ ಧಿವಾನ್-ಇ-ಖಾನ,

ದೆಹಲಿಯ ದಿವಾನ್-ಇ-ಆಮ್.

ದೆಹಲಿಯ ರಂಗಮಹಲ,

ದೆಹಲಿಯ ಮೋತಿಮಹಲ,

ದೆಹಲಿಯ ಹಿರಮಹಲ,

ಲಾಹೋರಿನ ಷಾಲಿಮಾರ ಹೂದೋಟ

ಕಾಶ್ಮೀರದ ಚಶ್ಮೀಶಾಹಿ ತೋಟ, ನಿಶಾಹತ್ ತೋಟ, ಶಾಲಿಮಾರ ತೋಟ, ಇನ್ನೂ ಅನೇಕ ಕಟ್ಟಡಗಳನ್ನು ಕಟ್ಟಿಸಿ ವಾಸ್ತುಶಿಲ್ಪ ತನ್ನದೇಆದ ಕೋಟುಗೆಯನ್ನು ನೀಡಿ ಸುವರ್ಣ ಯುಗವನ್ನಾಗಿದ್ದಾನೆ